**ಓ.ಎಸ್. ನಂಃ 386/2023**

**ಪಿ.ಡಬ್ಲ್ಯೂಃ 1**

**ದಿನಾಂಕ 25.11.2024 ರಂದು ಸಾಕ್ಷಿದಾರರನ್ನು ಕರೆಯಿಸಿ ಪ್ರಮಾಣ ವಚನ ಬೋಧಿಸಲಾಯಿತು.**

**ಮುಖ್ಯ ವಿಚಾರಣೆ ವಾದಿಯ ಪರ: ಶ್ರೀ ಎಲ್.ವಿ.ಆರ್ ವಕೀಲರಿಂದಃ**

ಈ ದಾವೆಯ ವಾದಿ ನನ್ನ ತಾಯಿಯಾಗಿದ್ದು, ಅವರ ಪರ ಸಾಕ್ಷ್ಯ ನುಡಿಯಲು ಸಾಮಾನ್ಯ ಅಧಿಕಾರ ಪತ್ರವನ್ನು ವಾದಿಯು ನೀಡಿರುತ್ತಾರೆ. ನಾನು ಈ ದಿನ ನನ್ನ ಮುಖ್ಯ ವಿಚಾರಣೆಯನ್ನು ಪ್ರಮಾಣಪತ್ರದ ರೂಪದಲ್ಲಿ ಸಲ್ಲಿಸುತ್ತಿದ್ದು ಅದನ್ನು ನನ್ನ ಮಾಹಿತಿ ಮೇರೆಗೆ ನನ್ನ ವಕೀಲರು ತಯಾರಿಸಿರುತ್ತಾರೆ. ಅದರಲ್ಲಿ ಬರೆದಿರುವ ಸಂಗತಿಗಳು ನಿಜ ಇರುತ್ತವೆ ಮತ್ತು ಅದರಲ್ಲಿರುವ ಸಹಿ ನನ್ನದಾಗಿರುತ್ತದೆ.

ವಾದಿ ಸಾಕ್ಷಿಗೆ ನೀಡಿದ ಸಾಮಾನ್ಯ ಅಧಿಕಾರ ಪತ್ರವನ್ನು ನಿಪಿ-1 ಎಂದು, ವಂಶಾವಳಿ ನಿಪಿ.2 ಎಂದು, ವಂಶವೃಕ್ಷ ಪತ್ರದ ದೃಡಿಕರಣ ಪತ್ರ ನಿಪಿ.3 ಎಂದು, ದಿಃ 24.10.1975 ರಂದು ಭೂ ನ್ಯಾಯ ಮಂಡಳಿ, ಕೆ.ಆರ್.ನಗರ ಹೊರಡಿಸಿದ ಆದೇಶದ ದೃಡಿಕೃತ ನಕಲನ್ನು ನಿಪಿ.4 ಎಂದು, ನಮೂನೆ 10 ರ ದೃಡಿಕೃತ ನಕಲನ್ನು ನಿಪಿ.5 ಎಂದು, ಪಹಣಿಗಳನ್ನು ನಿಪಿ.6 ರಿಂದ 11 ಎಂದು, ಮರಣ ಪ್ರಮಾಣ ಪತ್ರಗಳನ್ನು ನಿಪಿ.12 ಮತ್ತು 13 ಎಂದು, ಇನ್ನೊಂದು ಪಹಣಿಯನ್ನು ನಿಪಿ.14 ಎಂದು, ವರ್ಗಾವಣೆ ಆದೇಶಗಳನ್ನು ನಿಪಿ.15 ಮತ್ತು 16 ಎಂದು, ದಿಃ 08.02.2023 ರಂದು ಉಪವಿಭಾಗಾಧಿಕಾರಿ, ಹುಣಸೂರು ರವರು ಹೊರಡಿಸಿದ ಆದೇಶದ ಪ್ರತಿಯನ್ನು ನಿಪಿ.17 ಎಂದು ಗುರುತಿಸಲಾಯಿತು.

**ಪ್ರತಿವಾದಿ ಪರ ವಕೀಲರು ಪಾಟೀ ಸವಾಲಿಗೆ ಕಾಲಾವಕಾಶ ಕೋರಿದ್ದು ಕಾಲಾವಕಾಶ ನೀಡಲಾಯಿತು.**

( ಸಾಕ್ಷಿ ಹೇಳಿಕೆಯನ್ನು ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತ ಲೇಖನದಂತೆ ಗಣಕಯಂತ್ರದಲ್ಲಿ ಬೆರಳಚ್ಚು ಮಾಡಲಾಯಿತು. )

**ಓ. ಹೇ. ಕೇ. ಸರಿ ಇದೆ.**

ಹೆಚ್ಚುವರಿ ಸಿವಿಲ್ ಮತ್ತು ಜೆಎಂಎಫ್‌ಸಿ ನ್ಯಾಯಾಧೀಶರು
ಕೆ.ಆರ್.ನಗರ